ಸಿಸಿ. ನಂಬರ್.178/2024
ಪಿ ಡಬ್ಲ್ಯು: 3

/1/

ದಿನಾಂಕ: 16/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಪಿಟಿಡಿ., ವಕೀಲರಿಂದ:**

ಕೃತ್ಯ ನಡೆದಿದೆ ಎನ್ನಲಾದ ಸಮಯದಲ್ಲಿ ನಾನು ಹಾಗೂ ನನ್ನ ತಾಯಿ ನನ್ನ ಅಜ್ಜಿ ಮನೆಯಲ್ಲಿದ್ದೆವು. ನನ್ನ ಅಜ್ಜಿಯ ಮನೆಗೂ ಹಾಗೂ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೂ ಸುಮಾರು 100 ಮೀಟರ್ ಅಂತರ ಇತ್ತು. ಆರೋಪಿ ಹಲ್ಲೆ ಮಾಡಿದರು ಎನ್ನಲಾದ ಸಮಯದಲ್ಲಿ ನಾನು ಸದರಿ ಹಲ್ಲೆ ಮಾಡುವುದನ್ನು ನೋಡಿರುವುದಿಲ್ಲ. ಆ ಸಮಯದಲ್ಲಿ ನಾನು ಕೂಲಿ ಕೆಲಸ ಮಾಡುತ್ತಿದ್ದೆ. ನಾನು ತಕ್ಷಣವೇ ಸ್ಥಳಕ್ಕೆ ಬಂದು ನನ್ನ ತಾಯಿಯನ್ನು ಮನೆಗೆ ಕರೆದುಕೊಂಡು ಹೋದೆನು. ಆ ಸಮಯದಲ್ಲಿ ಚಸಾ 1 ರವರಿಗೆ ಬೆನ್ನಿಗೆ ಹಾಗೂ ಕೈಗೆ ಪೆಟ್ಟಾಗಿತ್ತು ಎಂದು ತಿಳಿಸಿದ್ದರು. ಆ ಸಮಯದಲ್ಲಿ ಚಾಸಾ 1 ರವರಿಗೆ ರಕ್ತ ಬರುವ ಗಾಯವಾಗಿರಲಿಲ್ಲ. ಸಾಮಾನ್ಯವಾಗಿ ನಾನು ಕೆಲಸ ಮುಗಿಸಿ 5-30 ಕ್ಕೆ ಮನೆಗೆ ಬರುತ್ತೇನೆ.

ಚಾಸಾ 1 ರವರನ್ನು ಕಮ್ಮರಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲು ಪ್ರಯತ್ನಿಸಿರುವುದಿಲ್ಲ, ಮಾರನೆ ದಿನ 8-45 ರಿಂದ 9-00 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಹೋಗಿದ್ದೆವು. ಹರಿಹರಪುರದ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರೇ ಪೋಲಿಸ್ ಠಾಣೆ ಇದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ದೂರು ದಾಖಲಿಸಿರುತ್ತೇವೆ.

ಸ್ಥಳ ಮಹಜರ್ ಮಾಡಲಾಯಿತು ಎನ್ನಲಾದ ಸಮಯದಲ್ಲಿ ನಾನು ಹಾಗೂ ಚಾಸಾ 1 ರವರು ಇದ್ದೆವು. ಆ ಸಮಯದಲ್ಲಿ ಪೊಲಿಸರು ಮಹಜರಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಮಹಜರ್ ಮಾಡಲಾಯಿತು ಎನ್ನಲಾದ ಸ್ಥಳದಲ್ಲೇ ಪೋಲಿಸರು ನನ್ನ ಹೇಳಿಕೆ ಪಡೆದಿರುತ್ತಾರೆ.

ಆರೋಪಿಯ ತಾಯಿ ಸರಸ್ವತಮ್ಮನವರು ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಒಂದು ಸಿವಿಲ್ ವ್ಯಾಜ್ಯವನ್ನು ದಾಖಲಿಸಿ ಅದರಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಆರೋಪಿತರು ನಾವು ಹಲ್ಲೆ ಮಾಡಿದೆವು ಎಂದು ದೂರು ದಾಖಲಿಸಿ ಇದೆ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಸದರಿ ಸರಸ್ವತಮ್ಮನವರು ಇದೇ

ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಪಡೆದಿದ್ದರಿಂದ ನಾನು ಹಾಗೂ ಚಾಸಾ 1 ರವರು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ, ಪ್ರಕರಣಕ್ಕೂ ಆರೋಪಿತರಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಃ ಮರು ವಿಚಾರಣೆ ಇಲ್ಲಃ

(ದಿನಾಂಕ:16/02/2026 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ